# ವಚನ ಚಳವಳಿ ಮತ್ತು ಮಹಿಳೆ

ಲಕ್ಷ್ಮೀ ಎಲ್. ಪೂಜಾರಿ

ಸಹಾಯಕ ಪ್ರಧ್ಯಾಪಕಿ, ಕನ್ನಡ ವಿಭಾಗ, ಕೆ. ಎಲ್, ಇ ಸಂಸ್ಥೆಯ ಎಸ್. ಎಸ್. ಎಮ್. ಎಸ್. ಮಹಾವಿದ್ಯಾಲಯ, ಅಥಣಿ.

DOI: https://doi.org/10.5281/zenodo.15504231

## ABSTRACT:

ವಚನ ಸಾಹಿತ್ಯ ಹನ್ನೆರಡನೇ ಶತಮಾನದಲ್ಲಿ ಹುಟ್ಟಿಕೊಂಡಂತಹ ವಿಶಿಷ್ಟ ಸಾಹಿತ್ಯದ ಪ್ರಕಾರ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿರುವುದನ್ನು ಕಾಣುತ್ತೇವೆ. ಈ ಯುಗವನ್ನು ಸಾಮಾಜಿಕ ಪರಿವರ್ತನೆ ಯುಗ ಎಂದು ಕರೆಯುವಷ್ಟರಮಟ್ಟಿಗೆ ಬದಲಾವಣೆ ಆಗಿರುವುದನ್ನು ಕಾಣುತ್ತೇವೆ. ವಚನ ಎಂದರೆ ಮಾತು, ಉಕ್ತಿ ಎಂಬ ಅರ್ಥವನ್ನು ಹೊಂದಿದ್ದು ಗದ್ಯ ಪದ್ಯಗಳ ರೂಪದಲ್ಲಿ ಕಂಡುಬಂದಿದೆ ಮಹಿಳೆಯರ ಸಮಾನತೆಗೆ ಸಾಕಷ್ಟು ಬದಲಾವಣೆಗಳನ್ನು ಮಾಡಿದೆ.

ಶತಮಾನಗಳಿಂದ ಅಸ್ಪೃಳಾಗಿದ್ದ ಅದೃಶ್ಯಳಾಗಿದ್ಧ ಹೆಣ್ಣನ್ನು ವಚನಕಾರರು ಮಾನವೀಯ ದೃಷ್ಟಿಯಿಂದ ಕಂಡಿದ್ದಾರೆ. ಪುರುಷನ ಹಾಗೆ ಮಹಿಳೆಗೆ ಸಮಾನವಾದ ಸ್ಥಾನವನ್ನು ನೀಡುವ ಮೂಲಕ 12ನೇ ಶತಮಾನದಲ್ಲಿ ವಚನಕಾರರು ಮಾಡಿದ ಒಂದು ಬೃಹತ್ ಬದಲಾವಣೆ ಇಡೀ ಜಗತ್ತನ್ನೇ ತಿರುಗಿ ನೋಡುವಂತೆ ಮಾಡಿದೆ. ಸ್ತ್ರೀಯರ ಸಮಾನತೆಗಾಗಿ ಮಾಡಿದ ಮೊದಲ ಚಳುವಳಿ ವಚನ ಚಳುವಳಿ ಎಂದು ಹಲವಾರು ಆಧಾರಗಳಿಂದ ತಿಳಿದು ಬಂದಿದೆ. ಸಮಾಜದಲ್ಲಿ ವರ್ಣ-ವರ್ಗಗಳ ಅಸಮಾನತೆಯಿಂದ ಜನರು ಶೋಷಣೆಗೊಳಗಾಗಿದ್ದರೆ; ಲಿಂಗ ತಾರತಮ್ಯದಿಂದ ಮಹಿಳೆ ಶೊಷಣೆಗೊಳಗಾಗಿದ್ದಾಳೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಇಂತಹ ತಾರತಮ್ಯವನ್ನು ಸಹಿಸದೇ ವಿರೋಧಿಸಿದರು. ಹೆಣ್ಣನ್ನು ಭೋಗದ ವಸ್ತು ರಕ್ಕಸಿ, ಅಪಶಕುನ, ಮತ್ತು ಮಕ್ಕಳನ್ನು ಹೆರುವ ಯಂತ್ರ ಅವಳು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗಿದ್ದು ಯಾವುದೇ ರೀತಿಯ ಸ್ವಾತಂತ್ರಯಿಲ್ಲದಂತಹ ಕಾಲದಲ್ಲಿ ಮೊಟ್ಟ ಮೊದಲು ಹೋರಾಟ ನಡೆಸಿದವರು ವಚನಕಾರರು. ಈ ಚಳುವಳಿಯೇ ವಚನ ವಚನಚಳುವಳಿಯಾಗಿದೆ.

## KEYWORDS:

ವಚನ ಚಳುವಳಿ, ಮಹಿಳಾ ಸಮಾನತೆ, ಸ್ತ್ರೀ ಶೋಷಣೆ, ಭಾರತೀಯ ಸಂಸ್ಕೃತಿ, ಸತಿ.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯುನ್ನು ಒಂದಲ್ಲ ಒಂದು ರೀತಿಯಲ್ಲಿ ಶೋಷಣೆ ಮಾಡುತ್ತಾ ಬಂದಿದ್ದಾರೆ ಅರಸಿಯಿಂದ ಹಿಡಿದು ದಾಸಿಯವರೆಗೆ ಯಾವುದಾದರು ರೂಪದಲ್ಲಿ ಶೋಷಿಸಲ್ಪಟ್ಟಿದ್ದಾರೆ. ಪಶು ಪ್ರಾಣಿಗಳಿಗಿಂತ ಕೀಳಾಗಿ ಕಾಣಲ್ಪಟ್ಟ ಈ ಸಮಾಜ ಅವಳನ್ನು ಮಾತೆ, ಆಧಿಶಕ್ತಿ ದೇವತೆಯೆಂದು ಪೂಜಿಸುತ್ತಾರೆ.

ಸ್ತ್ರೀ ಎಂಬ ಪದದಲ್ಲಿ 'ಸೂತ್ರಿ' ಸೋತೃ ಎಂಬ ಧಾತುವಿನಿಂದ ಬಂದಿದೆ ಸೂತ್ರಿ ಎಂದರೆ ಹೆರುವ ಪ್ರಾಣಿ ಎಂದಾಗುತ್ತದೆ ಹೀಗೆ ಗರ್ಭದ ಅಸ್ಥಿತ್ವದಿಂದ ಗುರುತಿಸುವ ಮಹಿಳೆಗೆ ಸ್ವತಂತ್ರ ಅಸ್ಥಿತ್ವಯಿಲ್ಲದಿರುವುದನ್ನು ಕಾಣುತ್ತೇವೆ. ವೇದಕಾಲದಲ್ಲಿ ಮಹಿಳೆಯರಿಗೆ ಪುರುಷರ ಹಾಗೆ ಸಮಾನವಾದ ಸ್ಥಾನಮಾನ ಲೋಪಮುದ್ರಾ, ಘೋಷಾ, ಇವರನ್ನು ಕಾಣುತ್ತೇವೆ. ಉಪನಿಷತ್ತಿನ ಕಾಲದಲ್ಲಿ ಮಹಿಳೆ ಹೆಚ್ಚು ಶೋಷಣೆಗೊಳಗಾದದ್ದನ್ನು ಗುರುತಿಸಬಹುದು. ಬ್ರಾಹ್ಮಣರಿಂದ ಮಹಿಳೆ ಅತಿಹೆಚ್ಚು ಶೋಷಣೆಗೊಳಗಾಗಿರುವುದನ್ನು ಹಲವಾರು ಉದಾಹರಣೆಗಳ ಮೂಲಕ ಗುರುತಿಸಬಹುದು.

ವೇದಕಾಲದಿಂದ ಮಹಿಳೆ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೊಳಗಾಗುತ್ತಿದ್ದಾಳೆ. 12ನೇ ಶತಮಾನದಲ್ಲಿ ಒಂದು ಕ್ರಾಂತಿಕಾರಿ ಹೋರಾಟದ ಮೂಲಕ ವಚನಕಾರರು ಮಹಿಳೆಯರಿಗೆ ಪುರುಷರ ಸರಿಸಮಾನವಾದಂತ ಸ್ಥಾನಮಾನ ನೀಡಲು ಪ್ರಯತ್ನಿಸಿದರು. 'ಜನವಾಣಿಯನ್ನು ದೇವವಾಣಿ'ಯಾಗಿ ಮಾಡಿದ ವಚನಕಾರರು ಮಹಿಳೆಗೆ ಉತ್ಕೃಷ್ಟ ಸ್ಥಾನಮಾನ ನೀಡಿದರು ಸಮಾಜದಲ್ಲಿ ಅವಳನ್ನು ಸಮಾನಳಾಗಿ ಕಂಡರು ದೈಹಿಕ ವ್ಯತ್ಯಾಸದಿಂದ ಗಂಡು ಹೆಣ್ಣು ಎಂಬ ಭೇದಭಾವ ಮಾಡುತ್ತಿದ್ದ ಸಮಾಜದ ಅನ್ಯಾಯವನ್ನು ಖಂಡಿಸಿದ ಶರಣರು ಅನೇಕ ವಚನಗಳ ಮೂಲಕ ಸಂದೇಶ ಸಾರಿದರು.

**"ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಗಂಡೆಂಬರು**
**ನಡುವೆ ಸುಳುವಾತ್ಮ ಗಂಡು ಅಲ್ಲ ಹೆಣ್ಣು ಅಲ್ಲ ಕಾಣಾ ರಾಮನಾಥ"**

ದಾಸಿಮಯ್ಯನು ಈ ಮೇಲಿನ ವಚನದ ಮೂಲಕ ದೈಹಿಕವಾಗಿ ಭಿನ್ನತೆಯಿದ್ಧರೂ ಅವರಿಬ್ಬರಲ್ಲಿರುವ ಆತ್ಮಕ್ಕೆ ಯಾವುದೇ ಭೇದವಿಲ್ಲ ಎಂದು ಹೇಳಿದ್ದಾರೆ ಅಷ್ಟೇ ಅಲ್ಲದೆ ಸ್ತ್ರೀಯನ್ನು ಪುರುಷನಿಗಿಂತಲೂ ಮಿಗಿಲೆಂದು ಹೇಳುತ್ತಾನೆ. ಸಿದ್ಧರಾಮನು ಹೆಣ್ಣನ್ನು ಉನ್ನತ ಸ್ಥಾನದಲ್ಲಿರಿಸಿ

**"ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ**
**ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ"**

ಎಂದು ತಿಳಿಸಿದ್ದಾನೆ. ಋತು ಚಕ್ರಗಳಿಗೆ ಸ್ತ್ರೀಯು ನೈಸರ್ಗಿಕವಾಗಿ ಬದ್ಧಳಾಗಿದ್ದಾಳೆ ಋತುಚಕ್ರವನ್ನು ಹೊಲೆಯೆಂದು ಕರೆದು ತಿರಸ್ಕರಿಸುವ ಸಮಾಜವನ್ನು ಕುರಿತು ಶರಣರು ವಿರೋಧಿಸಿದರು. ಸತಿಭಕ್ತೆಯಾದೊಡೆ ಹೊಲೆಗಂಜಬಾರದು ಎಂದು ಬಸವಣ್ಣ ತನ್ನ ವಚನದಲ್ಲಿ ತಿಳಿಸಿದ್ದಾರೆ. ಶರಣರ ಸ್ತ್ರೀ ಪರವಾದ ಈ ವಿಚಾರಗಳು ಕೇವಲ ವಿಚಾರವಾಗಿ ಉಳಿಯದೆ ಅನುಭವ ಮಂಟಪದಲ್ಲಿ ಭಾಗವಹಿಸುವ ಚರ್ಚಿಸುವ ಅವಕಾಶವಿತ್ತು ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ,

ರೇವಮ್ಮ, ನೀಲಾಂಬಿಕೆ, ಸಂಕವ್ವ, ಇಂತಹ ಹಲವಾರು ವಚನಕಾರ್ತಿಯರು ಇದ್ದಿರುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೇ ಕೌಶಿಕ ಮಹಾರಾಜನನ್ನು ತೊರೆದು ಬಂದ ಅಕ್ಕನಿಗೆ ಬೇಂಬಲ ನೀಡಿದ ಶರಣರನ್ನು ನೋಡಿದರೆ ಸ್ತ್ರೀ ಸಮಾನತೆಗೆ ಶರಣರು ಮಾಡಿದ ಪ್ರಯತ್ನವನ್ನು ಕಾಣುತ್ತೇವೆ. ಅಕ್ಕನು ತೀಳಿಸಿದ ಒಂದು ವಚನ ಮಹಿಳೆಯರ ಕುರಿತು

**"ಆಳುತನ ಮಾತನೇರಿಸಿ ನುಡಿದಡೆ**
**ಆಗಳ ಕಟ್ಟಿದೇನು ಗಂಡುಗಚ್ಚೆಯ**
. . .
**ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ**
**ಕಾಣಾ ಚೆನ್ನಮಲ್ಲಿಕಾರ್ಜುನ"**

ಎಂದು ಗಂಡಸರನ್ನು ನಡುಗಿಸುವಂತ ಈ ವಚನದ ಗಟ್ಟಿತನ ನಮಗೆ ಗೊತ್ತಾಗುತ್ತದೆ ಸಮಾಜದ ಹೆಣ್ಣನ್ನು ಕೇವಲ ಭೋಗದ ವಸ್ತು ಎಂದು ತಿಳಿದುಕೊಂಡ ಸಂದರ್ಭದಲ್ಲಿ ಅವಳ ಮೇಲೆ ನಡೆಯುವ ಅತ್ಯಾಚಾರ ದೌರ್ಜನ್ಯಗಳು ಅಸಂಭವವೇನು ಅಲ್ಲ. ಇದಕ್ಕೆ ಗಂಡಿನ ಕಾಮಚೇಷ್ಟೆಯೇ ಕಾರಣ ಇದು ಶರಣರ ಕಾಲದಲ್ಲಿ ಇತ್ತೆಂದು ಕಾಣಿಸುತ್ತದೆ. ಇದನ್ನು ನಿಲ್ಲಿಸಲು ಶರಣರು ಪ್ರಯತ್ನಿಸಿದರು ಬೇರೆ ಸ್ತ್ರೀಯರ ಜೊತೆ ಯಾವ ರೀತಿ ನಡೆದುಕೊಳ್ಳಬೇಕೆಂದು ತಿಳಿಸಿದ್ದಾರೆ.

**"ಫಲಬೇಕು ಶರಣಂಗೆ ಪರಸ್ತ್ರೀಯನ್ನೊಲ್ಲೆಂಬ"**

**"ಪರಸ್ತ್ರೀ ಪರಧನವೆಂಬೀ ಜೂಜಿಗಂಜುವೇ"**

ಹೀಗೆ ಬಸವಣ್ಣವರು ವಚನದ ಮೂಲಕ ತಿಳುವಳುಕೆ ನೀಡಿದ್ದಾರೆ. "ಗಂಡನುಳ್ಳದುನ ಗೌರಿ ಎಂದು ಕಂಡಂತೆ"ಎಂಬ ದಾಸಿಮಯ್ಯನ ವಚನದಲ್ಲಿ ಪರಸ್ತ್ರೀಯರನ್ನು ಯಾವ ರೀತಿ ನೋಡಬೇಂದು ತಿಳಿಸಿದ್ದಾರೆ.

"ಸತಿಪಪಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂದು ದಾಸಿಮಯ್ಯ ಗಂಡ ಹೆಂಡರ ನಡುವಿನ ಸಾಮರಸ್ಯವನ್ನು ತಿಳಿಸಿದ್ದಾರೆ. ಗಂಡಮಾತ್ರ ಭಕ್ತಿಯಿಂದ ಪೂಜಿಸಿದರೆ ಸಾಲದು ಹೆಂಡತಿಯ ಜೊತೆಯಾದರೆ ಮಾತ್ರ ಶಿವನಿಗೆ ಹಿತವಾಗುವುದು ಇಲ್ಲಿ ಯಾರು ಹೆಚ್ಚು ಅಲ್ಲ ಯಾರು ಕಡಿಮೆಯು ಅಲ್ಲ ಇಬ್ಬರು ಸಮಾನರು. ಶತಮಾನಗಳಿಂದ ಶ್ರೇಷ್ಠ ಚಿಂತಕನಾದ ದಾಸಿಮಯ್ಯ ಹೆಣ್ಣು ಗಂಡೆಂದಾಗಲಿ ಉತ್ತಮ ಅಧಮ ಕುಲಗಳ ಭೇದವನ್ನು ಉಚ್ಚ-ನೀಚ ಎಂದು ಕಲ್ಪಿಸುವುದನ್ನು ವಿರೋಧಿಸಿದ್ದಾನೆ. "ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತೆ" ಹೆಣ್ಣಿನ ದೇಹಕ್ಕೆ ಮಾತ್ರ ಚಿಹ್ನೆಗಳಿರುತ್ತವೆ ಹೊರತು ಪ್ರಾಣಕ್ಕಲ್ಲೆಂದು ತಿಳಿಸಿದ್ದಾನೆ.

ಬೊಮ್ಮಣ್ಣನು ಗಂಡು ಹೆಣ್ಣಿನ ಸಂಬಂಧವನ್ನು ವಿಚಾರಿಸುವಂತೆ ಹೆಣ್ಣಿಗು

ಗಂಡಿನ ಸಂಬಂಧ ವಿಚಾರಿಸುವ ಹಕ್ಕಿದೆ ಅವರಿಬ್ಬರ ನಡುವಿ ಸಮಾನತೆಯನ್ನು ಕುರಿತು

**"ಸತಿಯ ಗುಣ ಪತಿ ನೋಡಬೇಕಲ್ಲದೆ**
**ಪತಿಯ ಗುಣ ಸತಿ ನೋಡಬಹುದೆ ಎಂಬರು"**

ಇಬ್ಬರು ಒಬ್ಬರಿಗೊಬ್ಬರು ವಿಚಾರಿಸುವ ಸಮಾನ ಸ್ಥಾನಮಾನ ಇದೆ ಎಂದು ಹೇಳಿದ್ದಾನೆ. ದಾಸಿಮಯ್ಯನ ವಚನವನ್ನು ಅನುಕರಿಸಿದ ಗೊಗ್ಗವ್ವೆ ಮಹಿಳೆಯ ಬಗ್ಗೆ:

**"ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಮಿಸೆ ಕಾಸೆ ಬಂದರೆ ಗಂಡೆಂಬರು**
**ಈ ಉಭಯದ ಜ್ಞಾನ**
**ಹೆಣ್ಣೊ ಗಂಡೊ ನಾಸ್ತಿನಾತ"**

ಎಂದಿದ್ದಾಳೆ

**"ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ**
**ಮನದ ಮುಂದಿನ ಆಶೆಯೇ ಮಾಯೇ ಕಾಣ ರಾಮನಾಥ"**

ಹೊನ್ನು, ಹೆಣ್ಣು, ಮಣ್ಣು ಈ ಮೂರನ್ನು ಮಾಯೆಯೆಂದು ಕರೆಯತ್ತಾರೆ ಆದರೆ ಈ ಮೂರು ಮಾಯೆಯಲ್ಲ ನಮ್ಮ ಮನಸ್ಸಿನಲ್ಲಿರುವ ಆಶೆಯೇ ಮಾಯೇ ಹೆಣ್ಣನ್ನು ಮಾಯೆ ಎಂದು ತಮ್ಮ ಸ್ವಾರ್ಥಕ್ಕಾಗಿ ಶೋಷಿಸುತ್ತಾ ಬಂದಿದ್ದಾರೆ ಅವಳಿಗೂ ಒಂದು ಬದುಕಿದೆ ಅವಳಿಗೂ ಆಶೆ ಆಕಾಂಕ್ಷೆಗಳಿರುತ್ತೆ ಎನ್ನುದನ್ನು ಲೆಕ್ಕಿಸದೆ ಈ ಪುರುಷ ಪ್ರಧಾನ ಸಮಾಜ ಅವಳ ಮೇಲೆ ದೌರ್ಜನ್ಯ ಮಾಡುತ್ತಾ ಬಂದಿದೆ.

"ಲಿಂಗವ ಪೂಜಿಸಿ ಫಲವೇನು, ಸಮರತಿ ಸಮಕಳೆ ಸಮಸುಖರರಿಯದನ್ನಕ್ಕ?" ಎಂದು ಬಸವಣ್ಣ ಈ ವಚನದ ಮೊಲಕ ಸತಿಪತಿ ಒಂದಾಗಿ ಏಕೋಭಾವದಿಂದ ಸಮಾನತಾ ಪ್ರಜ್ಞೆಯಿಂದ ಬದುಕಬೇಕು. ಪತ್ನಿಯನ್ನು ಸಮಾನ ಭಾವದಿಂದ ಕಾಣದೆ ಬದುಕುವವನು ದೇವರಿಂದೆ ದೂರವಾಗುವನು. ಇಬ್ಬರು ಸಾಮ್ಯತೆಯಿಂದ ಬದುಕಿದರೆ ಮುಕ್ತಿ ಸಿಗುತ್ತೆ. ಸಮಾಜದಲ್ಲಿ ಹೆಣ್ಣನ್ನು ಸಂಪ್ರದಾಯ ಕಟ್ಟಳೆಗಳ ಮೂಲಕ ಶೋಷಿಸುತ್ತಿದ್ದ ಸಮಾಜದಲ್ಲಿ ಸಂಪ್ರದಾಯವನ್ನು ವಿರೋಧಿಸಿ ಮನೆಬಿಟ್ಟು ಬಂದ ಅಕ್ಕನ ಧೈರ್ಯ ಮಹಿಳೆಯರಿಗೆ ಮಾದರಿಯಾಗಿದೆ. ಅಕ್ಕ ವಚನದ ಮೊಲಕ ಸಂಸಾರಿಕ ಬದುಕಿಗಿಂತ ಆಧ್ಯಾತ್ಮಿಕ ಬದುಕು ಲೇಸೆಂದು ಹೇಳಿದ್ದಾಳೆ.

"ಸಾವಿಲ್ಲದ ಕೆಡಿಲ್ಲದ ಗಂಡನಿಗೊಲಿದೆನವ್ವ" ಎಂದು ಆಧ್ಯಾತ್ಮದ ಗಂಡ ಚೆನ್ನಮಲ್ಲಕಾರ್ಜುನನ್ನು ತನ್ನ ಗಂಡ ಎಂದು ಹೇಳಿದ್ದನ್ನು ನೋಡಿದರೆ ಅಕ್ಕನ ಧೈರ್ಯ

ಮೆಚ್ಚುವಂತದಾಗಿದೆ. ಬಸವಣ್ಣ ಹೆಣ್ಣನ್ನು ಕುರಿತು

**“ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ**
**ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ**
**ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ**
**ಇದಾವ ಪರಿಯಲ್ಲಿ ಕಾಡಿತ್ತು ಮಾಯೆ**
**ನೀವೆ ಬಲ್ಲಿರಿ ಕೂಡಲಸಂಗಮದೇವ”**

ಇಲ್ಲಿ ಬಸವಣ್ಣನ್ನು ನನಗೆ ಹೊರಬರಲು ಸಾಧ್ಯವಿಲ್ಲವೇ ಎಂದು ಪ್ರಶ್ನಿಸಿರುವುದು ಕಾಣುತ್ತದೆ ಇದರಲ್ಲಿ ಬಳಸಿದ ಎನ್ನ ಕೂಟ ಎಂಬ ಶಬ್ದ ನೋಡಿದಾಗ ಹೆಣ್ಣು ಮಕ್ಕಳು ಅನುಭವ ಮಂಟಪದಲ್ಲಿ ಭಾಗವಹಿಸುತ್ತಿದ್ದರು ಎನ್ನುವುದನ್ನು ಗುರ್ತಿಸಬಹುದು ಬಸವಾದಿ ಶರಣರು ಮಹಿಳೆಯರಿಗೆ ಪುರುಷನಷ್ಟೆ ಸರಿಸಮಾನ ಸ್ಥಾನ ನೀಡಿದ್ದರು.

ಈ ರೀತಿಯಾಗಿ ವಚನಕಾರರು ಮಹಿಳೆಯರ ಬಗ್ಗೆ ಒಳ್ಳೆಯ ನಿಲುವನ್ನು ಹೊಂದಿದ್ದು ಪುರುಷನಷ್ಟೇ ಸಮಾನವಾಗಿ ಕಂಡು ಸರಿಮಾನವಾದ ಅವಕಾಶಗಳನ್ನು ನೀಡಿದರು. ವಚನ ಚಳುವಳಿ ಎಂಬುದು ಒಂದು ಕ್ರಾಂತಿಕಾರಿ ಬದಲಾವಣೆಯ ಘಟ್ಟ. ಮಹಿಳೆಯನ್ನು ಸನಾತನವಾದಿಗಳಿಂದ ಸಂಪ್ರದಾಯದ ಕಟ್ಟಳೆಗಳಿಂದ ಮುಕ್ತಿ ನೀಡಲು ಪ್ರಯತ್ನ ಮಾಡಿದರೆಂದು ಹೇಳಬಹುದು ಅವರಿಗೂ ಸಮಾನ ಸ್ಥಾನ ಕಲ್ಪಸಿ ವಚನಗಳ ಚರ್ಚೆಯ ಜೊತೆಗೆ ಚರ್ಚಿಸುವ ಅವಕಾಶವಿತ್ತು ಅಡುಗೆ ಮನೆಗೆ ಸೀಮತವಾಗಿದ್ದ ಹೆಣ್ಣುಮಕ್ಕಳಿಗೆ ಸ್ವತಂತ್ರ ಅಸ್ತಿತ್ವ ಕೊಡುವ ಕಾರ್ಯವಾಯಿತು. ಸಮಾಜದಲ್ಲಿ ಅವಳ ಸ್ಥಾನವನ್ನು ಗುರುತಿಸುವ ಜೊತೆಗೆ ಅವಳ ಹಕ್ಕನ್ನು ತೋರಿಸುವ ಕೆಲಸವಾಗಿದ್ದು ವಚನಕಾರರಿಂದ. ಒಟ್ಟಾರೆ ವಚನಚಳುವಳಿ ಮಹಿಳೆಯರ ಸಮಾನತೆಗೆ ಮಾಡಿದ ಹೋರಾಟ ಒಂದು ದಿಟ್ಟ ಹೆಜ್ಜೆಯಾಗಿದೆ.

## ಪರಾಮರ್ಶನ ಗ್ರಂಥಗಳು:

1. ಚಿದಾನಂದಮೂರ್ತಿ ಎಂ. (ಸಂ), (2008), ಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ: ವಚನ ಸಾಹಿತ್ಯ: ಸಂಪುಟ-05, ಬೇಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಕಾಂಬಳೆ ವ್ಹಿ. ಆರ್. , (2020), ಅನುಸಂಧಾನ, ಎಸ್. ಎಲ್. ಎನ್. ಪಬ್ಲಿಕೇಷನ್, ಬೇಂಗಳೂರು.
3. ವೀರಣ್ಣ ರಾಜೂರ, (1991), ಶಿವಶರಣರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.